ಇಂದು ಶುಕ್ರವಾರ. ನನ್ನ ವಾರದ ರಜೆ. ಹಾಗೆಯೇ ಅಬಿಡ್ಸ್‌ವರೆಗೆ ಹೋಗಿ ವಿಶಾಲಾಂಧ್ರ ಬುಕ್ಸ್ ಅಂಗಡಿಯೊಳಗೆ ನುಗ್ಗಿದೆ. ಪುಸ್ತಕಗಳನ್ನು ತಿರುವಿಹಾಕುತ್ತಾ, ತೆಲುಗಿನ ಖ್ಯಾತ ಚಿತ್ರ ಕಲಾವಿದ ಬಾಪು ರಚಿಸಿದ ತೆಲುಗು ವರ್ಣಮಾಲೆ ಕುರಿತ ಪುಸ್ತಕ 'ಚೆಂದನೆಯ ಅ ಆ ಗಳು' ಪುಸ್ತಕ ಕಣ್ಣಿಗೆ ಬಿತ್ತು. ಒಂಥರಾ ನಿರಾಳವೆನಿಸಿತು. ಯಾಕೋ ಯಾವ ವರ್ಣಮಾಲೆ ಪುಸ್ತಕ ನೋಡಿದರೂ ನನಗೆ ನಮ್ಮಮ್ಮನನ್ನು, ನಮ್ಮೂರ ಮೇಷ್ಟ್ರನ್ನು ನೋಡಿದಹಾಗೆ ಆಗುತ್ತದೆ. ಹಳೆಯ ಬಿರುಕು ಬಿಟ್ಟ ಗೋಡೆಗಳ ನಮ್ಮ ಶಾಲೆ ನೆನಪಿಗೆ ಬರುತ್ತದೆ. ಆದ್ದರಿಂದಲೇ ವರ್ಣಮಾಲೆಯ ಪುಸ್ತಕ ಎಲ್ಲೇ ಕಣ್ಣಿಗೆ ಬಿದ್ದರೂ ಪ್ರೀತಿಯಿಂದ ಕೈಗೆತ್ತಿಕೊಂಡು ಸ್ವಲ್ಪ ಹೊತ್ತು ಕಣ್ತುಂಬಿಕೊಂಡು ನೆನಪುಗಳಲ್ಲಿ ವಿಹರಿಸುತ್ತೇನೆ. ಹೇಳಲು ಸ್ವಲ್ಪ ಕಷ್ಟವಾಗುತ್ತಾದೆಯಾದರೂ ಆ ಅನುಭವ ಅದ್ಭುತವಾಗಿರುತ್ತದೆ. ಅದರಲ್ಲೂ ಬಾಪೂ ಚಿತ್ರಗಳ ಪುಸ್ತಕ ಅದು. ತಕ್ಷಣವೇ ಕೈಗೆತ್ತಿಕೊಂಡು ಚೆಂದನೆಯ ವಿನ್ಯಾಸದ ಮುಖಪುಟವನ್ನು ನೇವರಿಸುತ್ತಾ, ಒಳಪುಟ ತೆಗೆದು ನೋಡಿ ದಿಗ್ಭ್ರಾಂತನಾದೆ.

ಅದರಲ್ಲಿ 'ಅ—ಅರಸ' ಎಂದಿತ್ತು. ಅ—ಎಂದರೆ ಅಮ್ಮ ತಾನೆ? 'ಅರಸ' ಎಂದಿದೆಯಲ್ಲಾ? ನಾವೆಲ್ಲಾ ಚಿಕ್ಕವರಿದ್ದಾಗ 'ಅ ಆ'ಗಳನ್ನು ಅಮ್ಮನ ಚಿತ್ರ ನೋಡಿ ತಾನೇ ಕಲಿತಿದ್ದು. ಆ ಪುಸ್ತಕದಲ್ಲಿ ಅಮ್ಮನ ಚಿತ್ರ ಎಷ್ಟು ಸುಂದರವಾಗಿತ್ತು. ಬೆಳ್ಳನೆಯ ಬೆಳದಿಂಗಳು, ತುಂಬು ಚಂದ್ರ... ತಣ್ಣನೆ ಆಕಾಶ, ರಾಟೆಯ ಬಾವಿ ಹಿಂದೆ ತುಣುಕು ಗೋಡೆ. ಗೋಡೆಯ ಮೇಲೆ ಪುಟ್ಟ ಪೋರ. ಸಂತಸದ ಅಮ್ಮನ ಮುಖ, ಹಣೆಯ ತುಂಬ ಕುಂಕುಮ, ಮುಡಿ ತುಂಬ ಹೂ, ಕೈಯಲ್ಲಿ ಪ್ರೀತಿಯ ತುತ್ತು, ಚಂದಮಾಮನನ್ನು ತೋರಿಸುವ ಎಡಗೈ ಬೆರಳು; ಆ ಚಿತ್ರವನ್ನು ಎಷ್ಟು ಸಲ ನೋಡಿದರೂ ಸಾಕಾಗುವುದಿಲ್ಲ. ಅಸಲಿಗೆ ಅಮ್ಮನ ಚಿತ್ರವನ್ನು ಯಾರು ಬರೆದರೂ ಚೆಂದವಾಗಿರುತ್ತದೆ. ವರ್ಣಮಾಲೆಯ ಪಠ್ಯ ಪುಸ್ತಕದ ಈ ಚಿತ್ರವನ್ನು ನಾವು ಬಿಳಿ ಹಾಳೆಯ ಮೇಲೆ ಬರೆದು ಖುಷಿ ಪಡುತ್ತಿದ್ದೆವು. ಆ ಚಿತ್ರ ಕೂಡಾ ಥೇಟ್ ಅಮ್ಮನಂತೆ ತುಂಬಾ ಆಪ್ತವಾಗಿರುತ್ತಿತ್ತು.

ಅಂಥ ಚೆಂದನೆಯ ಅಮ್ಮನನ್ನು ಚಿತ್ರಿಸದೆ ಬಾಪು ಏಕೆ ತಪ್ಪು ಮಾಡಿದ್ದಾರೆ. 'ಆಂ! ಇವರಿಗೇನು ಗೊತ್ತು. ನಾನು ಮಾಡಿದ ಚಿತ್ರವೇ ಸರಿ' ಎಂದು ಭಾವಿಸಿರಬಹುದೇ? ಯಾರಿಗೆ ಗೊತ್ತು. ಹಿರಿಯ ಕಲಾವಿದರು ಹಾಗೆಂದು ಕೊಂಡಿರಲೂಬಹುದು.

ನನಗೆ ತೆಲುಗು ವರ್ಣಮಾಲೆಯ ಪುಸ್ತಕಗಳು ಎಲ್ಲೇ ಆಗಲಿ ಕಣ್ಣಿಗೆ ಬಿದ್ದರೂ ಕೊಂಡು ಮನೆಯಲ್ಲಿ ಇಟ್ಟುಕೊಳ್ಳುವುದು ಅಭ್ಯಾಸ. ಕೆಲವರು ನವಿಲುಗರಿಯನ್ನು ಪುಟಗಳ ನಡುವೆ ಇಟ್ಟು ಕೊಂಡಂತೆ, ಇನ್ನು ಕೆಲವರು ಹಳೆಯ ಚಿನ್ನದ ನಾಣ್ಯಗಳನ್ನು ಸಂಗ್ರಹಿಸಿದಂತೆ, ನಾನು ತೆಲುಗಿನ ವರ್ಣಮಾಲೆಯ ಪುಸ್ತಕಗಳನ್ನು ಸಂಗ್ರಹಿಸುತ್ತೇನೆ. ಕೆಲವು ವರ್ಷಗಳ ಹಿಂದೆ ಪ್ರೊದ್ದುಟೂರಿನಲ್ಲಿ ಕೆಲಸ ಮಾಡುವ ನನ್ನ ದೋಸ್ತ್ ಮತ್ತು ಮೇಷ್ಟ್ರು 'ಓದಿನ ಬಾಬು'ವನ್ನು ದುಂಬಾಲು ಬಿದ್ದು ಸರ್ಕಾರ ಪ್ರಕಟಿಸಿದ್ದ ವರ್ಣಮಾಲೆಯ ಪಠ್ಯ ಪುಸ್ತಕವನ್ನು ತರಿಸಿಕೊಂಡಿದ್ದೆ. ಓದಿನಬಾಬು ನಮ್ಮೂರಿನಿಂದ ಸ್ವಲ್ಪದೂರದಲ್ಲಿದ್ದ ಒಂದು ಪುಟ್ಟ ಹಳ್ಳಿಯವನು.

ಆ ಹಳ್ಳಿಯಲ್ಲಿ ಇವನೇ ಮೊದಲ ವಿದ್ಯಾವಂತನೆಂದು ಎಲ್ಲರೂ ಅವನಿಗೆ 'ಓದಿನಬಾಬು' ಎಂದು ಹೆಸರಿಟ್ಟು ಎಲ್ಲರೂ ಹಾಗೇಯೇ ಕರೆಯುತ್ತಾರೆ. ವಾಸ್ತವವಾಗಿ ಅವನ ಹೆಸರು ಕಾಸಿಂ. ಅವನು ಕಳಿಸಿಕೊಟ್ಟಿದ್ದ ವರ್ಣಮಾಲೆಯ ಪುಸ್ತಕ ನನ್ನ ಮನೆಯಲ್ಲಿಯೇ ಇದೆ. ಚಿತ್ರಗಳಿರುವ ಪುಸ್ತಕ ಮನೆಗೆ ಬಂದರೆ ಸಾಕು ನಮ್ಮ ಪುಟ್ಟನಿಗೆ ಸಖತ್ ಖುಷಿ. ಅವನಿಗಿನ್ನೂ ಶಾಲೆಗೆ ಹೋಗುವ ವಯಸ್ಸಾಗಿಲ್ಲ. ಆದರೆ ದೊಡ್ಡ ದೊಡ್ಡ ಚಿತ್ರಗಳಿರುವ ಆ ಪುಸ್ತಕಗಳೆಂದರೆ ನನ್ನಂತೆಯೇ ಅವನಿಗೂ ತುಂಬಾ ಇಷ್ಟ. ಈಗಿನಿಂದಲೇ ಅವನಿಗೆ ತೆಲುಗು ಅಕ್ಷರಗಳ ಮೇಲೆ, ತೆಲುಗು ಚಿತ್ರಗಳ ಮೇಲಿನ ಪ್ರೀತಿಯನ್ನು